# ಪಿ. ಸತ್ಯವತಿಯವರ ಕತೆಗಳಲ್ಲಿ ಸ್ತ್ರೀ ಸ್ವಾಯತ್ತತೆಯ ಅಂಶಗಳು

**ಸುಧಾ ಬಿ. ಎಸ್.***

**DOI: https://doi.org/10.5281/zenodo.21794534**

**ABSTRACT**

ಮಹಿಳಾ ಕಥನ ಸಾಹಿತ್ಯಕ್ಕೊಂದು ಹೊಸ ಆಯಾಮವನ್ನು ತಂದುಕೊಟ್ಟಿರುವ 'ದಮಯಂತಿಯ ಮಗಳು' ಕಥಾ ಸಂಕಲನ ಆಧುನಿಕ, ಸುಶಿಕ್ಷಿತ, ಉದ್ಯೋಗಸ್ಥ ಹೆಣ್ಣು ಎದುರಿಸುತ್ತಿರುವ ಬಹುಮುಖೀ ಸವಾಲುಗಳನ್ನು, ಅದನ್ನು ಎದುರಿಸಲು ಬೇಕಿರುವ ಹೊರದಾರಿಗಳನ್ನು ಯಶಸ್ವಿಯಾಗಿ ಹಿಡಿದಿಡುತ್ತದೆ. ಸ್ತ್ರೀ ವಾದಿ ಸೈದ್ಧಾಂತಿಕತೆ ಕಟ್ಟಿಕೊಡುತ್ತಿರುವ ಆಧುನಿಕತೆಯ ಹಿಂಸಾ ರೂಪಗಳನ್ನು ಈ ಕಥೆಗಳು ಎಳೆ ಎಳೆಯಾಗಿ ತೆರೆದಿಡುತ್ತವೆ. ಆಧುನಿಕತೆ ಹೆಣ್ಣಿಗೆ ವರವೋ ಶಾಪವೋ ಎನ್ನುವುದು ನಿರಂತರ ಚರ್ಚೆಯ ವಿಷಯವಾಗಿರುವ ಸಂದರ್ಭದಲ್ಲಿ ಪಿ ಸತ್ಯವತಿಯವರು ಆಧುನಿಕತೆ ಹೆಣ್ಣಿನ ಬದುಕನ್ನು ಆವರಿಸಿರುವ ಬಗೆಯನ್ನೂ, ಹೆಣ್ಣು ಅದನ್ನು ಎದುರುಗೊಳ್ಳಬಹುದಾದ ವಿಧಾನಗಳನ್ನು ಈ ಕಥೆಗಳಲ್ಲಿ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ.

**KEYWORDS:** ಉದ್ಯೋಗಸ್ಥ ಮಹಿಳೆ, ಬಂಧನ ಮತ್ತು ವಿಮೋಚನೆ, ಸ್ತ್ರೀ ಸಂಕಥನ, ಹೆಣ್ಣಿನ ಅಸ್ಮಿತೆ, ಸ್ತ್ರೀ ಸ್ವಾತಂತ್ರ್ಯ, ಸ್ವ ಅಭಿವ್ಯಕ್ತಿ, ಸ್ವ ಪ್ರಜ್ಞೆ

* **ಡಾ. ಸುಧಾ ಬಿ. ಎಸ್.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.

ತೆಲುಗಿನ ಕತೆಗಾರ್ತಿ ಪಿ. ಸತ್ಯವತಿ ಅವರ ಏಳು ಕತೆಗಳನ್ನು ಅಜಯ್ ವರ್ಮಾ ಅಲ್ಲೂರಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಕಥಾ ಸಂಕಲನದಲ್ಲಿರುವ ಒಂದು ಕಥೆ ದಮಯಂತಿಯ ಮಗಳು. ಇದನ್ನೇ ಕೃತಿಗೆ ಶೀರ್ಷಿಕೆಯಾಗಿ ಇಡಲಾಗಿದೆ. ಇಲ್ಲಿರುವ ಪ್ರತಿಯೊಂದು ಕತೆಯೂ ಸ್ತ್ರೀ ಸಂಕಥನದ ಭಿನ್ನ ಭಿನ್ನ ಆಯಾಮಗಳನ್ನು ಇತಿಹಾಸದ ಚಲನೆಯೊಂದಿಗೆ ತಳುಕು ಹಾಕಿ ಕಥನ ರೂಪದಲ್ಲಿ ಕಟ್ಟಿಕೊಡುತ್ತವೆ. ಮಾನವ ಚರಿತ್ರೆಯ ಇತಿಹಾಸದ ಪುಟಗಳನ್ನು ತಿರುವಿಹಾಕುತ್ತಲೇ ಅವು ಹೆಣ್ಣಿನ ಬದುಕಿಗೆ ಮಾರಕವಾದ ವಿಧಾನವನ್ನು, ಹೆಣ್ಣು ತನ್ನನ್ನು ತಾನು ಮರೆಯುವಷ್ಟು ವಿಸ್ಮೃತಿಗೆ ಒಳಗಾದ ಬಗೆಗಳನ್ನು ಇಲ್ಲಿನ ಕತೆಗಳು ತೆರೆದಿಡುತ್ತವೆ. ಜೊತೆಗೆ ಮನುಷ್ಯನ ಬದುಕಿನ ಏಕತಾನತೆ, ಅದರ ನಿವಾರಣೆಗೆ ಗಂಡು ಹುಡುಕಿಕೊಂಡ ಹೊಸ ಹೊಸ ಆವಿಷ್ಕಾರಗಳು, ಅವನ ಸಾಧನೆಗಳು, ಹೆಣ್ಣಿನ ಅಸ್ಮಿತೆಯನ್ನು ಅಳಿಸಿಹಾಕಿರುವ, ಹಾಕುತ್ತಿರುವ ಬಗೆಯನ್ನು ಸೃಜನಾತ್ಮಕವಾಗಿ ಕಟ್ಟಿಕೊಡುತ್ತವೆ. ಇಲ್ಲಿರುವುದು ಕೇವಲ ಏಳು ಕತೆಗಳಾದರೂ ಇವು ಸ್ತ್ರೀ ಸಂಕಥನದ ಭೂತ, ಭವಿಷ್ಯ, ವರ್ತಮಾನಗಳನ್ನು ಒಟ್ಟಿಗೆ ಹಿಡಿದಿಟ್ಟಿವೆ. ಹಾಗಾಗಿ ದಮಯಂತಿಯ ಮಗಳು ಕಥಾಸಂಕಲನದಲ್ಲಿರುವ ಕತೆಗಳನ್ನು ಮೂರು ಆಯಾಮಗಳಲ್ಲಿ ಚರ್ಚೆಗೆ ಒಳಪಡಿಸಲು ಸಾಧ್ಯ.

ಮೊದಲನೆಯದು ಹೆಣ್ಣಿನ ಅಸ್ಮಿತೆ ಮರೆಯಾದ ಬಗೆಯನ್ನು ಕುರಿತಾದ ಕತೆಗಳು. ಇಲ್ಲಿನ 'ನಾನು ಬರುತ್ತೇನೆ ಕೇಳು' ಮತ್ತು 'ನನ್ನ ಹೆಸರೇನು' ಕತೆಗಳು ಹೆಣ್ಣಿನ ಅಸ್ಮಿತೆ ಹಂತ ಹಂತವಾಗಿ ಮರೆಯಾದ ಬಗೆಯನ್ನು ಸಶಕ್ತವಾಗಿ ಹಿಡಿದಿಡುತ್ತವೆ. ಇವು ಒಂದೆಡೆ ಗಂಡಿನ ಬಯಕೆ ಅವನ ಸಾಹಸ ಪ್ರಿಯತೆ, ಅವನ ಪ್ರೀತಿ, ಕುಟುಂಬ ಪ್ರೇಮಗಳು ಹೆಣ್ಣಿನ ಸ್ವಂತಿಕೆ, ಆಸೆ ಆಕಾಂಕ್ಷೆಗಳನ್ನು ನಾಶ ಮಾಡುತ್ತಿದ್ದರೆ ಮತ್ತೊಂದೆಡೆ ಹೆಣ್ಣು ಕುಟುಂಬ, ದಾಂಪತ್ಯ, ಸಂಸಾರದ ಏಕತಾನತೆಯಲ್ಲಿ ತನ್ನನ್ನೇ, ತನ್ನ ಹೆಸರನ್ನೇ, ತನ್ನ ಅಸ್ತಿತ್ವವನ್ನೇ, ಕಡೆಗೆ ತನ್ನ ಇರುವಿಕೆಯನ್ನೇ ಮರೆತು ಬಿಡುವ ಕ್ರೂರ ಸತ್ಯವನ್ನು ವ್ಯಂಗ್ಯ ಮತ್ತು ವಿಷಾದದ ಮೂಲಕ ಕಟ್ಟಿಕೊಡುತ್ತವೆ.

ಚರಿತ್ರೆಯ ಪುಟಗಳಲ್ಲಿ ಅಡಕವಾಗಿರುವ ಗಂಡಿನ ಅಧಿಕಾರ ದಾಹ, ಆವಿಷ್ಕಾರದ ಹಂಬಲ ಮತ್ತು ಒಡೆತನದ ಬಯಕೆಗಳು ನಿಧಾನವಾಗಿ ಹೆಣ್ಣನ್ನು ಅಧೀನವಾಗಿಸಿಕೊಂಡ ಬಗೆಯನ್ನು, ಪುರುಷ ಪ್ರಧಾನ ವ್ಯವಸ್ಥೆಯ ಚಲನೆಯ ವಿಧಾನದಲ್ಲಿಯೇ ಹೆಣ್ಣನ್ನು ಅಧೀನವಾಗಿಸಿಕೊಳ್ಳುವ ಹುನ್ನಾರ ಅಡಗಿರುವುದನ್ನು ಈ ಕತೆಗಳು ಕಟ್ಟಿಕೊಡುವ ಬಗೆ ವಿಶಿಷ್ಟವಾದದ್ದು. ತನ್ನ ಆಯಾಸ ನೀಗಿಸಲು ಗಂಡು ಕಂಡುಕೊಂಡ ಯಂತ್ರಗಳೇ ಅವನನ್ನು ನಿಯಂತ್ರಿಸುತ್ತಿರುವ ವಿಧಾನ ಒಂದೆಡೆಯಾದರೆ ಹೆಣ್ಣು ತನ್ನ ಇರುವಿಕೆಯನ್ನು, ಬೇಕು ಬೇಡಗಳನ್ನು ತನಗೆ ಅರಿವಿಲ್ಲದೇ ಕಳೆದುಕೊಳ್ಳುತ್ತಿರುವುದು ಮತ್ತೊಂದು ವಿಧಾನ. "ನನ್ನ ಗೆಳೆತನ, ನನ್ನ ಅಭಿರುಚಿ, ನನ್ನ ನೆನಪುಗಳು ನನ್ನ ಆಶಯಗಳು, ನನ್ನ ಆನಂದಗಳು, ನನ್ನ ನೈಪುಣ್ಯಗಳು ನನಗಷ್ಟೇ ಸಂಬಂಧಿಸಿದ ಕಲೆ ವಿಷಯಗಳು ಏನಾದವು?" ಎಂಬ ಮಾತುಗಳು ಆಶ್ಚರ್ಯಕರವಾದರೂ ವಾಸ್ತವ. ಸತ್ಯವತಿಯವರು ಅವಳ ಆಸಕ್ತಿಯ ವಿಷಯಗಳು ಮರೆಯಾದ ಬಗೆಯನ್ನು ಅವಳ ಹಾಡಿನ ರೂಪಕದ ಮೂಲಕ ಕಟ್ಟಿಕೊಡುತ್ತಾರೆ.

"ನೀನಾವುದೋ ಕೆಲಸದಲ್ಲಿ ಬಿಡುವಿಲ್ಲದೆ ಇದ್ದೀಯಲ್ಲಾ, ನಾನು ಸ್ವಲ್ಪ ಹೊತ್ತು ಹಾಗೇ ತಂಗಾಳಿಯಲ್ಲಿ ವಿಹರಿಸಿಕೊಂಡು ಬರುವೆ" ಎಂದು ಹೊರಟ ಹಾಡು ಮತ್ತೆ ಹಿಂದಿರುಗಲೇ ಇಲ್ಲ. ಅವಳಿಗೆ ಅದರ ನೆನಪೂ ಕೂಡ ಇರಲಿಲ್ಲ ಎನ್ನುವುದು ಹೆಣ್ಣು ಕುಟುಂಬದ ಚೌಕಟ್ಟಿನೊಳಗೆ ಬಂಧಿಯಾಗಿರುವುದನ್ನೂ, ಅದರ ಕಾರ್ಯ ಮಾದರಿಯನ್ನೂ, ಅದು ಒಂದು ರೀತಿಯಲ್ಲಿ ಬಿಡುಗಡೆಯೇ ಇಲ್ಲದ ನಿರಂತರ ಶ್ರಮ ಮತ್ತು ಜಡತೆಯ ಭಾಗವಾಗಿರುವುದನ್ನು ತಿಳಿಸಿಕೊಡುತ್ತದೆ. ಆಧುನಿಕತೆ ಭಾಗವಾದ ಈ ಜಡತೆಯೂ ಕೂಡ ಒಂದು ರೀತಿಯಲ್ಲಿ ಹಿಂಸಾತ್ಮಕವೇ ಎಂಬುದನ್ನು ಕತೆ ತಿಳಿಸುತ್ತದೆ. ಚಾರಿತ್ರಿಕ ಘಟನೆಗಳನ್ನು ಕಲಾತ್ಮಕ ಚೌಕಟ್ಟಿನಲ್ಲಿ ತರುವಾಗ ಚರಿತ್ರೆ ಮತ್ತು ಕಲೆ ಎರಡಕ್ಕೂ ಕಿಂಚಿತ್ತೂ ಮುಕ್ಕಾಗದಂತೆ ವಾಸ್ತವದ ನೆಲೆಯಲ್ಲಿ ಅದನ್ನು ಕಟ್ಟಿಕೊಟ್ಟಿರುವುದು ಸತ್ಯವತಿ ಅವರ ಕಥೆಗಳ ವೈಶಿಷ್ಟ್ಯ.

ಹೆಣ್ಣು ಹಂತ ಹಂತವಾಗಿ ಪುರುಷ ಪ್ರಧಾನ ವ್ಯವಸ್ಥೆಯ ಕಪಿಮುಷ್ಟಿಯೊಳಗೆ ಸಿಲುಕಿಕೊಳ್ಳುವುದರಲ್ಲಿ ವ್ಯವಸ್ಥೆಯ ಪಾಲು ಎಷ್ಟಿದೆಯೋ ಹೆಣ್ಣಿನ ಪಾಲು ಕೂಡ ಅಷ್ಟೇ ಇದೆ ಎನ್ನುವುದರ ಕಡೆಗೆ ಇವರ ಗಮನ ಇದೆ. ಈ ಅಂಶವನ್ನು ಮೇಲಿನ ಎರಡೂ ಕಥೆಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಗಂಡು ಹೆಣ್ಣನ್ನು ತನ್ನ ಅಧೀನವಾಗಿಸಿಕೊಳ್ಳಲು ಅವಳು ಪ್ರೇಮ, ಪ್ರೀತಿ, ದಾಂಪತ್ಯಗಳ ಸೆಳೆತಕ್ಕೆ ಸಿಕ್ಕು ತನ್ನನ್ನು ತಾನು ಸಂಪೂರ್ಣವಾಗಿ ಮರೆತದ್ದರಿಂದಲೇ. ಹೆಣ್ಣು ತನ್ನ ಬಗೆಗೆ ತಾನೇ ಆಲೋಚಿಸಬೇಕಾದ ಸಂದರ್ಭದಲ್ಲಿ ಅವಳು ಸಂಪೂರ್ಣವಾಗಿ ವಿಸ್ಮೃತಿಗೆ ಒಳಗಾದದ್ದೇ ಇದಕ್ಕೆಲ್ಲಾ ಕಾರಣ. ಹೆಣ್ಣನ್ನು ಈ ರೀತಿ ವಿಸ್ಮೃತಿಗೆ ಒಳಗಾಗಿಸುವಲ್ಲಿ ಗಂಡಿನ ಪ್ರೀತಿ, ಕಾಳಜಿ, ನಯವಂಚಕತನಗಳೇ ಕಾರಣ ಎಂಬುದನ್ನು ಹೇಳುತ್ತಿರುವಾಗಲೂ ಹೆಣ್ಣಿಗಿರಬೇಕಾದ ಎಚ್ಚರದ ಬಗೆಗೆ ಗಮನ ಸೆಳೆಯುತ್ತಾರೆ. ಹಾಗಾಗಿಯೇ ಇವರ ಕತೆಗಳು ಸದಾ ಹೆಣ್ಣು ತಾನೇ ಕಂಡುಕೊಳ್ಳಬಹುದಾದ ಹೊರದಾರಿಗಳನ್ನು ಕುರಿತು ಚಿಂತಿಸುತ್ತವೆ.

ಮತ್ತೊಂದೆಡೆ ಹೆಣ್ಣು ಪುರುಷ ಪ್ರಧಾನ ವ್ಯವಸ್ಥೆಯಿಂದ ದತ್ತವಾಗಿರುವ ಪಾತ್ರಮಾದರಿಗಳಲ್ಲಿ ಸಿಲುಕಿ ತನ್ನನ್ನು ಕಂಡುಕೊಳ್ಳಲು ಪಡುತ್ತಿರುವ ಪರಿಪಾಟಲುಗಳನ್ನು 'ನನ್ನ ಹೆಸರೇನು' ಕತೆ ಕಟ್ಟಿಕೊಡುತ್ತದೆ. ಹೆಸರು ಎನ್ನುವುದು ಸ್ವ ವ್ಯಕ್ತಿತ್ವದ, ಸ್ವ ಪ್ರಜ್ಞೆಯ, ಸ್ವ ಅರಿವಿನ, ಸ್ವ ವಿಕಾಸದ, ಸ್ವ ಅನುಭವದ, ಸ್ವ ಅಭಿವ್ಯಕ್ತಿಯ ಪ್ರತಿಮಾ ರೂಪ. ಹೆಸರೇ ಇಲ್ಲದಿರುವಿಕೆ ಅವಳನ್ನು ಸಂಪೂರ್ಣವಾಗಿ ಇಲ್ಲವಾಗಿಸುವಿಕೆಯ ರೂಪಕವಾಗಿದೆ. ತನ್ನ ಹೆಸರನ್ನೇ ಮರೆತು ಹೋಗುವ, ತನ್ನ ಬೇಕು ಬೇಡಗಳನ್ನು ಇಲ್ಲವಾಗಿಸಿಕೊಂಡು ಬದುಕುವ ಪರಿ ಓದುಗರಿಗೆ ವ್ಯಂಗ್ಯದಂತೆ ಕಂಡರೆ ಸ್ವ ಅನುಭವದ ದೃಷ್ಟಿಯಿಂದ ಅದಕ್ಕಿಂತ ಹಿಂಸಾತ್ಮಕವಾದ ಸನ್ನಿವೇಶ ಬೇರೊಂದಿರಲಾರದು. ಮಕ್ಕಳಿಗೆ ಅಮ್ಮ, ಕೆಲಸದವಳಿಗೆ ಯಜಮಾನಿ, ಪಕ್ಕದ ಮನೆಯವರಿಗೆ ತೆಳ್ಳಗೆ, ಬೆಳ್ಳಗಿರುವ ಹೆಣ್ಣು, ಗಂಡನಿಗೆ ಈಕೆ, ಎಂದೆಲ್ಲಾ ಹೇಳುತ್ತಲೇ ತನ್ನ ವ್ಯಕ್ತಿತ್ವ ಏನು? ಎಂದು ಗುರುತಿಸಿಕೊಳ್ಳುವ ಹಕ್ಕು ಅವಳಿಗಿದ್ದರೂ ಅವಳೇ ಅದನ್ನು ಕಳೆದುಕೊಂಡಿರುವುದರ ಸಂಕೇತವಾಗಿ ಈ ಕಥೆ ಮೈದಳೆದಿದೆ. ಎಲ್ಲೂ ಕೂಡ ತನ್ನ

ಹೆಸರಿನ ಮೂಲಕ ಗುರುತಿಸಿಕೊಳ್ಳಲಾಗದ ವಿಷಮ ಸ್ಥಿತಿಯಲ್ಲಿ ಹೆಣ್ಣು ಇಂದಿಗೂ ತೊಳಲಾಡುತ್ತಿರುವುದನ್ನು ಮುನ್ನೆಲೆಗೆ ತರುತ್ತಲೇ, ಹೆಣ್ಣು ಪ್ರೀತಿಯ ಹೆಸರಿನಲ್ಲಿ ಭ್ರಮನಿರಸನಕ್ಕೆ ಒಳಗಾಗಿರುವುದರ ಬಗೆಗೆ ಎಚ್ಚರಿಕೆಯನ್ನು ನೀಡುತ್ತದೆ. ಸತ್ಯವತಿಯವರ ಕಥೆಗಳ ವಿಶೇಷತೆ ಅಡಗಿರುವುದು ಇಷ್ಟಕ್ಕೇ ಕತೆ ನಿಲ್ಲದೆ ಹೆಣ್ಣು ತನ್ನ ಪರಿಸ್ಥಿತಿಯಲ್ಲಿ, ಮನಸ್ಥಿತಿಯಲ್ಲಿ ಬದಲಾಗಬೇಕಾದ ಅನಿವಾರ್ಯತೆಯನ್ನೂ, ದೃಢತೆಯನ್ನೂ ಎತ್ತಿ ಹಿಡಿಯುತ್ತದೆ. ವ್ಯಂಗ್ಯ ವಿಡಂಬನೆಯೊಂದಿಗೆ ವಾಸ್ತವದ ಚಿತ್ರಣವನ್ನು ತೆರೆದಿಡುವ ಕಥೆ ಬೆಳೆಯುತ್ತಾ ಹೋದಂತೆ ಲೇಖಕಿಯೇ ನಾಯಕಿಯಾಗುವ, ನಾಯಕಿಯೇ ತನ್ನನ್ನು ತಾನು ಓದಿಕೊಳ್ಳುವ ಪರಿಗೆ ಮಾದರಿಯಾಗಿ ಇಡೀ ಸಾಮಾಜಿಕ ವ್ಯವಸ್ಥೆಗೆ ಕನ್ನಡಿ ಹಿಡಿಯುತ್ತದೆ.

ಎರಡನೆಯ ಮಾದರಿ ಹೆಣ್ಣು ತನ್ನ ಅಸ್ಮಿತೆಯನ್ನು ಕಂಡುಕೊಳ್ಳುತ್ತಿರುವುದನ್ನು ಕುರಿತಾದ ಕತೆಗಳು. ಉದಾ: ದಮಯಂತಿಯ ಮಗಳು, ಒಬ್ಬ ವಸುಂಧರೆ, ಸಂಧ್ಯಾರಾಗ. ಈ ಕತೆಗಳಲ್ಲಿ ಹೆಣ್ಣಿನ ಬಿಡುಗಡೆ ಅಥವಾ ಆಯ್ಕೆಯ ದಾರಿಗಳು ಭಿನ್ನ ಭಿನ್ನವಾದರೂ ಈ ಕತೆಗಳಲ್ಲಿ ಗುರುತಿಸಬಹುದಾದ, ಏಕ ಸೂತ್ರದಲ್ಲಿ ಬೆಸೆಯಬಹುದಾದ ತಂತು ಎಂದರೆ ಸ್ತ್ರೀ ಪಾತ್ರಗಳು ಪುರುಷ ಪ್ರಧಾನ ವ್ಯವಸ್ಥೆಗೆ ತೋರುತ್ತಿರುವ ತೀವ್ರ ಪ್ರತಿರೋಧ. ಹಾಗಾಗಿ ಈ ಕತೆಗಳಲ್ಲಿನ ಸ್ತ್ರೀ ಪಾತ್ರಗಳು ಹೆಣ್ಣನ್ನು ನಿಕೃಷ್ಟವಾಗಿ ನೋಡುವ, ಅವಳ ಆತ್ಮಗೌರವಕ್ಕೆ ಕುಂದುಂಟು ಮಾಡುವ, ಅವಳ ಜೀವನವನ್ನು ನಿರಂತರವಾಗಿ ಆತಂಕದಲ್ಲಿಡುವ ಪುರುಷ ಪ್ರಧಾನ ವ್ಯವಸ್ಥೆಯಿಂದ ಹೊರಬರಬಹುದಾದ ದಾರಿಗಳ ಹುಡುಕಾಟದಲ್ಲಿವೆ.

ದಮಯಂತಿಯ ಮಗಳು ಕತೆಯಲ್ಲಿ ದಮಯಂತಿ ಕುಟುಂಬದಿಂದ ಹೊರಬರುವ ಮೂಲಕ ಪುರುಷ ಪ್ರಧಾನ ವ್ಯವಸ್ಥೆಯ ಶೋಷಣೆಯಿಂದ ಮುಕ್ತಳಾಗುವ ದಿಟ್ಟತನವನ್ನು ತೋರುತ್ತಾಳೆ. ಆದರೆ ಈ ಕತೆಯ ವಿಶೇಷತೆ ಅಡಗಿರುವುದು ದಮಯಂತಿ ತೆಗೆದುಕೊಂಡ ನಿರ್ಧಾರದಿಂದ ಆಗುವ ಪರಿಣಾಮಗಳನ್ನು ಲೇಖಕಿ ಹಿಡಿದಿಟ್ಟಿರುವ ಬಗೆಯಲ್ಲಿ. ಕುಟುಂಬ, ಸಮಾಜ, ವ್ಯವಸ್ಥೆ, ಅವಳ ನಿಕಟ ಸಂಬಂಧಿಕರಿಗೆ ದಮಯಂತಿಯ ಈ ಚಲನೆ ಬಿಡುಗಡೆಯ ಪ್ರತೀಕವಾಗಿ ತೋರದೆ ದೋಷಪೂರಿತವಾಗಿ ಕಂಡುಬರುತ್ತದೆ. ಇದರ ಪರಿಣಾಮವನ್ನು ಎದುರಿಸುವವಳು ಅವಳ ಮಗಳು.

ದಮಯಂತಿಯ ಗಂಡ ಮತ್ತು ಮಗ ಎದುರಿಸುತ್ತಿರುವ ಸಮಸ್ಯೆಗಳಿಗೂ ಮಗಳು ಎದುರಿಸುತ್ತಿರುವ ಸಮಸ್ಯೆಗಳಿಗೂ ವ್ಯತ್ಯಾಸವಿದೆ. ಮಗನಿಗೆ ಎಲ್ಲವನ್ನೂ ವಿಮರ್ಶಾತ್ಮಕವಾಗಿ, ವಸ್ತುಸ್ಥಿತಿಯ ನೆಲೆಯಲ್ಲಿ ಗ್ರಹಿಸಲು ಸಾಧ್ಯವಾಗುವಂತೆ ಮಗಳಿಗೆ ಸಾಧ್ಯವಾಗುವುದಿಲ್ಲ. ಅವಳಿಗೆ ತಾಯಿಯೊಂದಿಗಿನ ಭಾವನಾತ್ಮಕ ಬಂಧವನ್ನು ಬಿಡಿಸಿಕೊಳ್ಳಲು ಎಷ್ಟು ವರ್ಷಗಳಾದರೂ ಆಗುತ್ತಿಲ್ಲ. ಅದೇ ಸಮಯದಲ್ಲಿ ದಮಯಂತಿಯ ಗಂಡ ಮಾತ್ರ ಮತ್ತೊಂದು ಮದುವೆಯನ್ನು ಮಾಡಿಕೊಂಡು ಯಥಾ ಪ್ರಕಾರ ಜೀವನ ನಡೆಸುತ್ತಾನೆ.

ದಮಯಂತಿಯ ಬದುಕಿನೊಂದಿಗೆ ನಿಕಟವಾಗಿ ಬೆಸೆದುಕೊಂಡ ಈ ಮೂರೂ ಪಾತ್ರಗಳು ಎದುರುಗೊಳ್ಳುವ ಸವಾಲುಗಳು ಭಿನ್ನ ಸ್ವರೂಪದವು ಎಂಬುದನ್ನು ತಿಳಿಸುತ್ತಲೇ, ಎಲ್ಲಾ ಹಂತದಲ್ಲಿಯೂ ತಾಯಿಯೊಂದಿಗೆ ಕಳೆದುಕೊಂಡ ಬಂಧದ ನೋವನ್ನು ಅನುಭವಿಸುತ್ತಿರುವವಳು ದಮಯಂತಿಯ ಮಗಳು. ಹಾಗಾಗಿಯೇ ಕತೆಯ ಶೀರ್ಷಿಕೆ ಕೂಡ ಅವಳನ್ನು ಕುರಿತದ್ದೇ ಆಗಿದೆ.

ದಮಯಂತಿಯ ಮಗನ ಆಲೋಚನೆ ಪ್ರಗತಿಪರತೆಯಿಂದಲೂ, ಮಾನವ ಸಹಜ ವಾತ್ಸಲ್ಯದಿಂದಲೂ ಕೂಡಿದ್ದು ಎಲ್ಲಾ ನೋವುಗಳನ್ನು ಮೀರಿ ತನ್ನ ಬದುಕನ್ನು ರೂಪಿಸಿಕೊಳ್ಳುವ ಶಕ್ತಿಯನ್ನು ಹೊಂದಿದ್ದರೆ, ಮಗಳ ಸ್ಥಿತಿ ಬೇರೆ. ತಾಯಿ ಇಲ್ಲದ ನೋವು ಒಂದೆಡೆಯಾದರೆ ಸಾಮಾಜಿಕ ವ್ಯವಸ್ಥೆ ಇದನ್ನು ಗುರಿಯಾಗಿಸಿಕೊಂಡು ಅವಳನ್ನು ನಡೆಸಿಕೊಳ್ಳುತ್ತಿರುವುದರ ಬಗೆಗಿನ ನೋವು ಮತ್ತೊಂದು ಬಗೆಯದ್ದು. ಹೆಣ್ಣೊಬ್ಬಳ, ತಾಯಿಯೊಬ್ಬಳ, ಮಗಳೊಬ್ಬಳ, ಅಂತಃಕರಣವನ್ನು ಈ ಕತೆ ಎಳೆ ಎಳೆಯಾಗಿ ಬಿಚ್ಚಿಡುತ್ತಲೇ ಮಕ್ಕಳ ಬದುಕು ತಾಯಿಯ ಬದುಕಿನೊಂದಿಗೆ ಬೆಸೆದುಕೊಂಡಿರುವ ಬಗೆಯನ್ನೂ, ಅವಳ ನಿರ್ಧಾರಗಳು ಮಕ್ಕಳ ಜೀವನದಲ್ಲಿ ನೆರಳಿನಂತೆ ಹಿಂಬಾಲಿಸುವುದನ್ನೂ ಮಾರ್ಮಿಕವಾಗಿ ತೆರೆದಿಡುತ್ತದೆ. ದಮಯಂತಿಯ ನಿರ್ಧಾರದಲ್ಲಿನ ಸರಿ ತಪ್ಪುಗಳ ನಿಷ್ಕರ್ಷೆಗೆ ಮುಂದಾಗದೆ ಕೇವಲ ವಸ್ತುಸ್ಥಿತಿಯನ್ನು ಮಾತ್ರ ಕಟ್ಟಿಕೊಡುತ್ತದೆ. ದಮಯಂತಿಯ ನಿರ್ಧಾರವನ್ನು ವ್ಯವಸ್ಥೆ ನೋಡುವ ಬಗೆ, ಅವಳ ಮಗಳ ಜೀವನದಲ್ಲಾಗುತ್ತಿರುವ ಏರುಪೇರುಗಳು ಎಲ್ಲವನ್ನೂ ಹೇಳುತ್ತಲೇ ಹೆಣ್ಣೊಬ್ಬಳು ತನ್ನ ಸ್ವಂತ ಬದುಕನ್ನು ಕಟ್ಟಿಕೊಳ್ಳಲು ಇರಬಹುದಾದ ತೊಡಕುಗಳನ್ನು ವಿವರಿಸುತ್ತದೆ. ಒಟ್ಟಾರೆ ಈ ಕಥೆ ಹೆಣ್ಣಿನ ಜೀವನದ ಪ್ರತಿಯೊಂದು ಆಗುಹೋಗುಗಳೂ ಕೂಡ ಆ ಕುಟುಂಬದ ಮತ್ತೊಂದು ಹೆಣ್ಣಿನೊಂದಿಗೆ ಸಹಜವಾಗಿ ಬೆಸೆದುಕೊಂಡಿದೆ. ಹಾಗಾಗಿ ಮಗಳು ಮತ್ತು ಅವಳ ಅತ್ತೆ ಇಬ್ಬರೂ ಕೂಡ ಇಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ತಲ್ಲಣಗಳನ್ನು ಎದುರಿಸುವವರೇ ಆಗಿದ್ದಾರೆ.

ಒಬ್ಬ ವಸುಂಧರೆ ಕತೆ ಹೆಣ್ಣಿನ ಆರ್ಥಿಕ ಸ್ವಾವಲಂಬನೆಯ ಮಹತ್ವವನ್ನು ಎತ್ತಿಹಿಡಿಯುತ್ತದೆ. ಆರಂಭದಲ್ಲಿ ಹಾಲು ಹಾಕುವ ವಯಸ್ಸಾದ ಮುದುಕನಿಗೆ, ಕೆಲಸದ ಅಜ್ಜಿಗೆ ದುಡಿಮೆಯ, ಹಣದ ಅವಶ್ಯಕತೆಯನ್ನು ಪ್ರತಿಪಾದಿಸುತ್ತಾ, ಎಲ್ಲರಿಗೂ ಒಂದಲ್ಲಾ ಒಂದು ರೀತಿಯಲ್ಲಿ ಹಣ ಗಳಿಕೆ ಎಷ್ಟು ಮುಖ್ಯ ಎಂಬುದನ್ನು ತಿಳಿಸಿಕೊಡುತ್ತದೆ. ಕತೆ ಮುಂದುವರಿಯುತ್ತಾ ಹೋದಂತೆ ಕುಟುಂಬದಲ್ಲಿ ಹೆಣ್ಣಿಗೆ ಆರ್ಥಿಕ ಸ್ವಾವಲಂಬನೆ ಕೇವಲ ಅವಶ್ಯಕತೆಯಲ್ಲ, ಅದು ಅನಿವಾರ್ಯ ಎಂಬುದರ ಕಡೆಗೆ ಗಮನ ಸೆಳೆಯುತ್ತದೆ. ರಾಮರಾಯನೊಂದಿಗೆ ಸುದೀರ್ಘ ಸಾಂಸಾರಿಕ ಜೀವನವನ್ನು ನಡೆಸಿದ ವಸುಂಧರೆ ತನ್ನ ಇರುವಿಕೆ, ದುಡಿಮೆ, ಜೀವನದ ಸರ್ವಸ್ವವನ್ನೂ ಕುಟುಂಬಕ್ಕೇ ಮೀಸಲಾಗಿರಿಸಿರುತ್ತಾಳೆ. ಆದರೆ ರಾಮರಾವ್ ತೆಗೆದುಕೊಂಡ ನಿರ್ಧಾರಗಳು ಕೇವಲ ಅವಳಿಗಷ್ಟೇ ಅಲ್ಲ ಸ್ವತಃ ರಾಮರಾಯರಿಗೂ ಕೆಡುಕಾಗಿ ಮಾರ್ಪಟ್ಟು ಕುಟುಂಬದ ಎಲ್ಲರೂ ಅದರಿಂದಾಗಿ ತೊಂದರೆ ಅನುಭವಿಸಬೇಕಾಗಿರುವುದು ಒಂದು ಕಡೆಯಾದರೆ, ಇದುವರೆಗಿನ ರಾಮರಾಯರ

ನಿರ್ಧಾರಗಳು ಅವಳ ಅಸ್ತಿತ್ವವನ್ನು ಸಂಪೂರ್ಣವಾಗಿ ಇಲ್ಲವಾಗಿಸುತ್ತಿರುವ ಕ್ರಮದಿಂದಾಗಿ ಅವಳನ್ನು ಮಾನಸಿಕವಾಗಿ ಘಾಸಿಗೊಳಿಸುತ್ತಿರುವುದು ಇನ್ನೊಂದು ಕ್ರಮ. ಜೊತೆಗೆ ರಾಮರಾವ್ 'ಇಷ್ಟೂ ವರುಷ ಒಂದು ಬಿಡಿಗಾಸನ್ನೂ ದುಡಿಯದೆ ತಾನೂ ದುಡಿದು ತಂದು ಹಾಕಿದ್ದನ್ನು ಹಾಳು ಮಾಡಿದೆ' ಎಂದ ಮಾತುಗಳು ಅವಳು ಸ್ವಂತ ದುಡಿಮೆಯ ಹಾದಿಯನ್ನು ಕಂಡುಕೊಳ್ಳುವಂತೆ ಮಾಡುತ್ತವೆ. ವಸುಂಧರೆ "ನನಗೂ ಯಾರಾರ ಹಾಂಗ ಕೊಟ್ಟರಾ ನಾನೂ ಹೋಗುತ್ತಿದ್ದೆ. ನನ್ನ ಬದುಕಿನ್ನು ನಂದೇ ಅಂತಾ ಒಂದೇ ಒಂದು ರೂಪಾಯಿಯನ್ನರೆ ಗಳಿಸಿಲ್ಲ. ಇದುವರೆಗೂ ನಲವತ್ತು ವರುಷ ಹಾಳು ಚಾಕರೀ ಮಾಡಿದ್ದಕ್ಕೆ ಒಂದು ರೂಪಾಯಿಯ ಕಿಮ್ಮತ್ತೂ ಇಲ್ಲದಂಗಾತು" ಎನ್ನುವುದು ವಸುಂಧರೆಯ ಅಳಲು. ಹಾಗಾಗಿ ಮುತ್ತುವಿನ ಸಹಕಾರದಿಂದ ತಾನು ಮನೆಯಲ್ಲಿ, ಮನೆಯವರಿಗಾಗಿ ಮಾಡಿದ ಕೆಲಸವನ್ನೇ ಬೇರೆಯವರ ಮನೆಯಲ್ಲಿ ಮಾಡುವುದರಿಂದ ಆರ್ಥಿಕವಾಗಿ ಸ್ವಾವಲಂಬಿಯಾಗಬಹುದು ಎಂದು ನಿರ್ಧರಿಸುತ್ತಾಳೆ. ಇದು ಒಂದು ರೀತಿಯಲ್ಲಿ ವ್ಯವಸ್ಥೆಯ ವಿಡಂಬನೆ ಮತ್ತು ವ್ಯಂಗ್ಯ ಎನಿಸುತ್ತದೆ. ಮನೆಯಲ್ಲಿ ಬೆಲೆಯಿಲ್ಲದ ದುಡಿಮೆ ಹೊರಗಡೆ ಮಾಡಿದಾಗ ಹಣ ಗಳಿಕೆಯ ಮಾರ್ಗವಾಗುತ್ತದೆ. ಹಣದ ಗಳಿಕೆ ಎನ್ನುವುದು ಅವಳಿಗೆ ಸಹಜವಾಗಿಯೇ ಆತ್ಮಸ್ಥೈರ್ಯ ಮತ್ತು ಸ್ವಾವಲಂಬನೆಯನ್ನು ತಂದುಕೊಡುತ್ತದೆ.

ಗಂಡಿನ ದುಡಿಮೆ, ಅದರ ಬಗೆಗಿನ ಅಹಂಕಾರ, ಅವನ ನಿರ್ಧಾರಗಳು ಹೆಣ್ಣನ್ನು ಗಾಸಿಗೊಳಿಸುತ್ತಿರುವ ಬಗೆಯನ್ನೂ, ಅವಳ ಕುಟುಂಬದ ಎಲ್ಲಾ ಹಂತದಲ್ಲಿಯೂ ಅವಳನ್ನು ಸಂಪೂರ್ಣ ನಿರ್ಲಕ್ಷಿಸಿ, ಅವಳ ಅಭಿಪ್ರಾಯಕ್ಕೆ ಕಿಂಚಿತ್ತೂ ಬೆಲೆ ಕೊಡದೆ ಇರುವುದು ಅವಳ ಅಸ್ತಿತ್ವವನ್ನು ನಿರಾಕರಿಸುವ ಬಗೆಗಳಲ್ಲೊಂದು ಎಂಬುದನ್ನು ಕತೆ ತಿಳಿಸುತ್ತದೆ.

ಇವೆಲ್ಲಕ್ಕಿಂತ ಭಿನ್ನ ರೀತಿಯ ನಿರ್ಧಾರವನ್ನು ಸಂಧ್ಯಾರಾಗ ಕಥೆಯ ಅರುಂಧತಿ ತೆಗೆದುಕೊಳ್ಳುತ್ತಾಳೆ. ಬದುಕಿನ ಎಲ್ಲಾ ಜಂಜಡ ಹಾಗೂ ಅವಮಾನಗಳಿಂದ ಬಿಡುಗಡೆ ಪಡೆಯಲು ಸಾವನ್ನು ಆಯ್ಕೆ ಮಾಡಿಕೊಳ್ಳುವ ಅರುಂಧತಿಯ ನಿರ್ಧಾರ ಬದುಕಿನಿಂದ ವಿಮುಖವಾಗುತ್ತಿರುವುದು ಎಂಬಂತೆ ಕಂಡುಬಂದರೂ ಆಂತರ್ಯದಲ್ಲಿ ಅದು ತನ್ನದೇ ಆದ ಸ್ವಂತ ನಿರ್ಧಾರವನ್ನೂ, ತನ್ನದೇ ಆದ ಸ್ವಂತ ಆಯ್ಕೆಯ ಬದುಕನ್ನು ಕಟ್ಟಿಕೊಳ್ಳುವ ಸ್ವರೂಪದ್ದು ಎಂದೆನಿಸುತ್ತದೆ. ಸಾವಿನ ಆಯ್ಕೆ ಕೂಡ ಒಂದು ರೀತಿಯಲ್ಲಿ ಪುರುಷ ಅಹಂಕಾರಕ್ಕೆ ತೋರುತ್ತಿರುವ ಪ್ರತಿರೋಧದ ಮಾದರಿಯಾಗಿ ಕಂಡುಬರುತ್ತದೆ.

ಅರುಂಧತಿ ಜೀವನದುದ್ದಕ್ಕೂ ಗಂಡ ಸೂರ್ಯನಾರಾಯಣನಿಂದ ಅನುಭವಿಸಿದ ನೋವು, ಅವಮಾನ, ಅಸಹಾಯಕತೆಗಳು ಅವಳು ಇಂಥದ್ದೊಂದು ನಿರ್ಧಾರವನ್ನು ತೆಗೆದುಕೊಳ್ಳುವಂತೆ ಮಾಡುತ್ತದೆ. ಅದರ ಜೊತೆಗೆ ಗಂಡು ಎನ್ನುವ ಅಹಂ, ಸಾಂಪ್ರದಾಯಿಕ ಮನಸ್ಥಿತಿ, ಎಲ್ಲರ ಮುಂದೆ ತಾನು ಒಳ್ಳೆಯವನಾಗುವ ಸಲುವಾಗಿ ಹೆಂಡತಿಯನ್ನು ಸದಾ ಅವಮಾನಿಸುತ್ತಾ, ಹೀಯಾಳಿಸುತ್ತಾ ಇರುವ ಅವನ ಮನಸ್ಥಿತಿಯನ್ನು ಬದಲಿಸಲು ಸಾಧ್ಯವೇ ಇಲ್ಲ ಎನ್ನುವ ಅರಿವು ಹಾಗೂ ಮುಂದೆಯೂ

ಕೂಡ ಅವನ ನೆರಳಾಗಿ ಬದುಕಬೇಕಾದ ಅನಿವಾರ್ಯತೆ ಇಲ್ಲ ಎನ್ನುವ ತೀರ್ಮಾನ ಅವಳ ಈ ನಿರ್ಧಾರವನ್ನು ಮತ್ತಷ್ಟು ಬಲಗೊಳಿಸುತ್ತದೆ. ತನ್ನ ನಿರ್ಧಾರವನ್ನು ಕುರಿತಂತೆ "ತುಂಬಾ ಸಲ ಬಂದಿತ್ತು ಈ ಯೋಚನೆ. ಈ ಯೋಚನೆ ಬಂದಾಗಲೆಲ್ಲಾ ಪಿಳಿಪಿಳಿ ಕಣ್ಣು ಬಿಟ್ಟು ಸೆರಗು ಹಿಡಿದು ತಿರುಗುವ ಮಕ್ಕಳು, ಮಲತಾಯಿ ನೀಡಬಹುದಾದ ಚಿತ್ರಹಿಂಸೆ, ತಾಯಿ ತೀರಿಹೋದ ದುಃಖದಿಂದ ಹಾಳಾಗುವ ಭವಿಷ್ಯ – ಅವೆಷ್ಟಿವೆಯೋ ಹೆಣ್ಣನ್ನು ಸಾಯದಂತೆ ಬಂಧಿಸುವ ಪರಿಸ್ಥಿತಿಗಳು" ಎನ್ನುವ ಅರುಂಧತಿಯ ಆಲೋಚನೆಗಳು ಅವಳ ವೈಯಕ್ತಿಕತೆಯನ್ನು ದಾಟಿ ಇಡೀ ಸ್ತ್ರೀ ಸಮುದಾಯ ಎದುರಿಸುತ್ತಿರುವ ಸವಾಲಿನ ಬದುಕಿನ ಕಡೆಗೆ ಬೆಳಕು ಚೆಲ್ಲುತ್ತದೆ.

ಒಟ್ಟಾರೆ ಈ ಮೂರೂ ಕತೆಗಳ ವಿಶೇಷತೆ ಎಂದರೆ ಇವು ಪ್ರಸ್ತುತ ಸಾಮಾಜಿಕತೆಯೊಂದಿಗೆ ಬೆಸೆದುಕೊಂಡಿರುವ ನಂಟು. ಪ್ರಸ್ತುತ ಸಮಾಜದ ಹತ್ತು ಹಲವು ವಿಷಯಗಳನ್ನು ಒಂದೊಂದು ಕತೆಯೂ ವಿಸ್ತಾರವಾಗಿ ಚರ್ಚೆಗೆ ಒಳಪಡಿಸುತ್ತದೆ. ಜೊತೆಗೆ ಹೆಣ್ಣಿನ ವ್ಯಕ್ತಿತ್ವವನ್ನು ಪ್ರಗತಿಪರ ಆಲೋಚನೆಯ ನಿಟ್ಟಿನಲ್ಲಿ ಕಟ್ಟುವುದರೊಂದಿಗೆ ಆಧುನಿಕತೆ ಭಿನ್ನ ಭಿನ್ನ ಕಾರ್ಯಮಾದರಿಗಳನ್ನು ಕುರಿತು ಚಿಂತಿಸುವಂತೆ ಮಾಡುತ್ತದೆ. ಈ ಕತೆಗಳ ಮತ್ತೊಂದು ವಿಶೇಷತೆ ಎಂದರೆ ಮುಖ್ಯ ಸ್ತ್ರೀ ಪಾತ್ರಗಳ ಜೊತೆಗೆ ಬೆಸೆದುಕೊಂಡಿರುವ ಅನೇಕ ಸ್ತ್ರೀ ಪಾತ್ರಗಳು ಈ ಕತೆಗಳಿಗೆ ಒಂದು ಹೊಸ ನೋಟವನ್ನೂ, ಹೆಣ್ಣಿನ ಜೀವನ ಕ್ರಮದಲ್ಲಾಗುತ್ತಿರುವ ಸ್ಥಿತ್ಯಂತರವನ್ನೂ ತೆರೆದಿಡುತ್ತವೆ.

ಮೂರನೆಯ ಮಾದರಿ ಆಧುನಿಕತೆಯ ಮಾಯಾಜಾಲದೊಳಗೆ ಹೆಣ್ಣು ಹೇಗೆಲ್ಲಾ ಬಲಿಯಾಗುತ್ತಿದ್ದಾಳೆ ಎನ್ನುವುದನ್ನು ತಿಳಿಸುವ ಕತೆಗಳು. ಉದಾ: ಹೆಸರಿಲ್ಲದ ಹುಡುಗಿ, ಸೂಪರ್ ಮಾಮ್ ಸಿಂಡ್ರೋಮ್ ಕತೆಗಳು ಎರಡು ವಿಭಿನ್ನ ಸನ್ನಿವೇಶದಲ್ಲಿ ಹೆಣ್ಣು ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಶೋಷಣೆಗೆ ಒಳಗಾಗುತ್ತಿರುವುದನ್ನು ತಿಳಿಸುತ್ತದೆ. ಹೆಸರಿಲ್ಲದ ಹುಡುಗಿ ವ್ಯವಸ್ಥೆಯ ಕರಾಳ ಮುಖವೊಂದನ್ನು ತೆರೆದಿಡುತ್ತದೆ. ದಿನನಿತ್ಯ ನಡೆಯುತ್ತಿರುವ ಹೆಣ್ಣುಮಕ್ಕಳ ಅಪಹರಣ, ಅತ್ಯಾಚಾರದಂತಹ ಹೀನ ಕೃತ್ಯಗಳಿಗೆ ಬಲಿಯಾಗುತ್ತಿರುವ ನೂರಾರು ಹೆಣ್ಣುಮಕ್ಕಳ, ಅವರನ್ನು ಹೆತ್ತವರ ನೋವು, ಸಂಕಟಗಳನ್ನು ಕಟ್ಟಿಕೊಡುತ್ತದೆ. ಮಾಲಕ್ಷ್ಮಿಗೆ ಮಗಳನ್ನು ಕಳೆದುಕೊಂಡಿರುವ ನೋವು ಒಂದೆಡೆಯಾದರೆ ವ್ಯವಸ್ಥೆ ಅದನ್ನು ನಿರೂಪಿಸುತ್ತಿರುವ ಮತ್ತು ನಿರ್ವಹಿಸುತ್ತಿರುವ ವಿಧಾನದಿಂದ ಆಗುತ್ತಿರುವ ಅವಮಾನ, ಹಿಂಸೆ ಮತ್ತೊಂದು ಬಗೆಯದ್ದು. ಹೆಣ್ಣು ಮಕ್ಕಳಿಗೆ ಒದಗಿ ಬರುತ್ತಿರುವ ಸವಾಲುಗಳನ್ನು ಮುನ್ನೆಲೆಗೆ ತರುವುದರ ಬದಲು ಮತ್ತೆ ಮತ್ತೆ ಅವರನ್ನೇ ಶೋಷಣೆಯ ಕೇಂದ್ರವಾಗಿಸಿ ಅವರ ವಿರುದ್ಧವೇ ಮಾತನಾಡುವುದರ ಮೂಲಕ ಮತ್ತೆ ಶೋಷಣೆಗೆ ಒಳಪಡಿಸುತ್ತಿರುವುದು ಈ ವ್ಯವಸ್ಥೆಯ ದೊಡ್ಡ ದುರಂತ ಎಂಬುದನ್ನು ಮಾರ್ಮಿಕವಾಗಿ ಕಟ್ಟಿಕೊಡುತ್ತದೆ.

ಸೂಪರ್ ಮಾಮ್ ಸಿಂಡ್ರೋಮ್ ಕತೆ ನನ್ನ ಹೆಸರೇನು ಕತೆಯ ಮುಂದುವರಿದ ಭಾಗದಂತೆ ಭಾಸವಾಗುತ್ತದೆ. ಎಲ್ಲವನ್ನೂ, ಎಲ್ಲರನ್ನೂ

ಸರಿಯಾಗಿಯೇ ಇಡುತ್ತೇನೆಂಬ ಹೆಣ್ಣಿನ ಮನಸ್ಥಿತಿಯನ್ನು ಈ ಕತೆ ವ್ಯಂಗ್ಯವಾಗಿ ಕಟ್ಟಿಕೊಡುತ್ತದೆ. ಆಧುನಿಕ, ದುಡಿಯುವ ಹೆಣ್ಣಿನ ಮಾನಸಿಕ, ದೈಹಿಕ ತೊಳಲಾಟಗಳನ್ನು ಕಟ್ಟಿಕೊಡುತ್ತಲೇ ಹೆಣ್ಣು ಹೀಗೇಕೆ ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತದೆ. ಆಧುನಿಕ, ದುಡಿಯುವ ಸುಶಿಕ್ಷಿತ ಹೆಣ್ಣಿನ ಸವಾಲುಗಳನ್ನು ಅದರ ಪರಿಹಾರೋಪಾಯಗಳನ್ನು ಅತ್ಯಂತ ಸೂಕ್ಷ್ಮವಾಗಿ ಈ ಕಥೆಗಳು ಹಿಡಿದಿಡುತ್ತವೆ.

ಒಟ್ಟಾರೆ ಇವರ ಕತೆಗಳ ವಿಶೇಷತೆ ಎಂದರೆ ಹಲವು ಮಾದರಿಯ ಸ್ತ್ರೀ ಪಾತ್ರಗಳು ಚಿತ್ರಿತವಾಗಿರುವಾಗಲೂ ಭಿನ್ನ ಭಿನ್ನ ಸನ್ನಿವೇಶ, ಸಂದರ್ಭಗಳಲ್ಲಿಯೂ ಇವು ಒಂದಕ್ಕೊಂದು ಪೂರಕವಾಗಿ ವರ್ತಿಸುವುದು. ಈ ಕತೆಗಳ ಸ್ತ್ರೀ ಪಾತ್ರಗಳಲ್ಲಿ ವೈಮನಸ್ಸು, ವಿಷಮತೆಗಳಿದ್ದರೆ ಅದು ಆ ಸಂದರ್ಭಕ್ಕೆ ಸೀಮಿತವೇ ವಿನಃ ಮೂಲತಃ ಕೆಟ್ಟ ಮನಸ್ಥಿತಿಯವರಲ್ಲ ಎಂಬುದನ್ನು ಕಟ್ಟಿಕೊಡುತ್ತವೆ. ಈ ಕತೆಗಳಲ್ಲಿರುವ ಬಹುತೇಕ ಸ್ತ್ರೀ ಪಾತ್ರಗಳು ತಾಯ್ತನದ ಮಾಧುರ್ಯವನ್ನು, ಹೆಣ್ತನದ ಸೌಂದರ್ಯವನ್ನು ಆಂತರ್ಯದಲ್ಲಿ ಹುದುಗಿಸಿಕೊಂಡವರೇ. ಹಾಗಾಗಿ ಈ ಎಲ್ಲಾ ಕತೆಗಳಲ್ಲಿನ ಎಲ್ಲಾ ಸ್ತ್ರೀ ಪಾತ್ರಗಳು ತಮ್ಮದೇ ಆದ ಗಟ್ಟಿತನವನ್ನು ಮೈಗೂಡಿಸಿಕೊಂಡಿವೆ. ಇವರ ಕತೆಗಳಲ್ಲಿ ಹೆಪ್ಪುಗಟ್ಟಿದ ನೋವು ಕತೆಯಾದಂತೆ ಭಾಸವಾಗುತ್ತದೆ. ಎಲ್ಲಿಯೂ ಅತಿರೇಕದ ವರ್ಣನೆಗಳಿಲ್ಲದೆ, ಸರಿ ತಪ್ಪುಗಳ ನಿಷ್ಕರ್ಷೆಗೆ ಒಳಗಾಗದೆ ತನ್ನೆದುರಿಗೆ ವಸ್ತುಸ್ಥಿತಿಯನ್ನು ಮುಚ್ಚು ಮರೆಯಿಲ್ಲದೆ, ಯಾವುದೇ ಬಗೆಯ ಆಡಂಬರ, ಅಂಜಿಕೆಗಳಿಲ್ಲದೆ ಬಿಚ್ಚಿಡುತ್ತಾರೆ.

## ಆಕರ ಗ್ರಂಥ:

1. ಪಿ. ಸತ್ಯವತಿ (ಅನು: ಅಜಯ್ ವರ್ಮಾ ಅಲ್ಲೂರಿ), (2002), ದಮಯಂತಿಯ ಮಗಳು, ಶಿವಮೊಗ್ಗ: ಅಹರ್ನಿಶಿ ಪ್ರಕಾಶನ.

## ಪರಾಮರ್ಶನ ಗ್ರಂಥಗಳು:

1. ವಿಜಯಾದಬ್ಬೆ, (1989), ಮಹಿಳೆ ಸಾಹಿತ್ಯ ಸಮಾಜ, ಮೈಸೂರು: ರಚನಾ ಪ್ರಕಾಶನ.
2. ವಿಜಯಾದಬ್ಬೆ, (1997), ನಾರಿ: ದಾರಿ– ದಿಗಂತ, ಮೈಸೂರು: ರಚನಾ ಪ್ರಕಾಶನ.
3. ಸುಮಿತ್ರಾಬಾಯಿ ಬಿ. ಎನ್., (1999), ಸ್ತ್ರೀವಾದ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.